ದಿನಾಂಕ: 22-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು:- ಪ್ರತಿವಾದಿ ನಂ.**4** ರಿಂದ **15** ಪರ ಶ್ರೀ ವಿ ಬಿ ಟಿ ವಕೀಲರಿಂದ.

ಗಾಳೆಪ್ಪ ನನ್ನ ತಂದೆ ಇರುತ್ತಾರೆ. ಗಾಳೆಪ್ಪ ಬೇವಿನಹಳ್ಳಿ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ. ಅವರ ಖುದ್ದು ಊರು ಸಹ ಬೇವಿನಹಳ್ಳಿ ಆಗಿತ್ತು. ಅವರು ನನ್ನ ಅಜ್ಜ ಬಂಡೆಪ್ಪ ಇವರಿಗೆ 1964 ರಲ್ಲಿ ದತ್ತು ಹೋಗಿದ್ದರು. ಗಾಳೆಪ್ಪನ ಸ್ವಂತ ಊರು ಸವಣೂರು ತಾಲೂಕಿನ ಕಲಿವಾಳ ಗ್ರಾಮ ಎಂದರೆ ಸರಿ. ಕಲಿವಾಳ ಮತ್ತು ಬೇವಿನಹಳ್ಳಿ ಗ್ರಾಮದ ನಡುವೆ 25 ಕೀ.ಮೀ. ಅಂತರ ಎಂದರೆ ಸರಿ. ದಾವಾ ಆಸ್ತಿಗಳು ಬಂಡೆಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಅವು ಬಂಡೆಪ್ಪ ಇವರಿಂದ ಗಾಳೆಪ್ಪ ಇವರಿಗೆ ಬಂದಿರುತ್ತವೆ ಎಂದರೆ ಸರಿ. ಬಂಡೆಪ್ಪ ಗಾಳೆಪ್ಪ ಇವರನ್ನು ದತ್ತು ಪಡೆದಾಗ ನಾನು ಇನ್ನೂ ಜನಿಸಿರಲಿಲ್ಲ. ಅವರು ದತ್ತು ಪಡೆದುಕೊಂಡ 4 ವರ್ಷಗಳ ನಂತರ ಅಂದರೆ 1968 ರಲ್ಲಿ ನಾನು ಜನಿಸಿರುತ್ತೇನೆ. ಬಂಡೆಪ್ಪ ಮತ್ತು ಆತನ ದತ್ತಕ ಮಗ ಗಾಳೆಪ್ಪ ಇವರಿಗೆ ಮನೆತನದ ಎಷ್ಟು ಸಾಲಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಗಾಳೆಪ್ಪ ಇವರು 1988 ರಲ್ಲಿ ತೀರಿಕೊಂಡಿರುತ್ತಾರೆ. ಬಂಡೆಪ್ಪ ಇವರಿಂದ ಗಾಳೆಪ್ಪ ಇವರಿಗೆ ಬಂದ ಆಸ್ತಿಗಳು ಗಾಳೆಪ್ಪ ಇವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಗಾಳೆಪ್ಪ ಇವರ ಮನೆತನದ ಸ್ವಂತದ ಸಾಲ ಎಷ್ಟು ಇತ್ತು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಗಾಳೆಪ್ಪ ಇವರು ತನ್ನ ಆಸ್ತಿಗಳನ್ನು ಮಾರಾಟ ಮಾಡಿ ತೀರಿ ಹೋಗಿರುತ್ತಾರೆ ಎಂದರೆ ಸರಿ. 1965 ರ ನಂತರ ಗಾಳೆಪ್ಪ ತಮ್ಮ ಮನೆತನದ ವೈಯಕ್ತಿಕ ಸಾಲ ತೀರಿಸುವುದರ ಸಲುವಾಗಿ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಹಾಗೇ ಖರೀದಿ ಹಿಡಿದ ರಾಮಣ್ಣ ಕೆಂಚಣ್ಣನವರ ಇವರು ಅವುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡು ತೀರಿ ಹೋಗಿರುತ್ತಾರೆ ಎಂದರೆ ಸರಿ. ರಾಮಣ್ಣ ತೀರಿ ಹೋಗಿ ಈಗ ಎಷ್ಟು ವರ್ಷ ಆಯಿತು ಎಂದು ಗೊತ್ತಿಲ್ಲ. ರಾಮಣ್ಣ ತೀರಿಕೊಂಡ ನಂತರ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತಮ್ಮಲ್ಲಿ ವಾಟ್ನಿ

ಮಾಡಿಕೊಂಡಿರುತ್ತಾರೆ ಎಂದರೆ ಸರಿ. ರಾಮಣ್ಣ ಇವರ ಸಹೋದರ ಬಸಪ್ಪ ಇವರು ಸಹ ತಮಗೆ ಬಂದ ಆಸ್ತಿಗಳಲ್ಲಿ ಪಾಲು ಮಾಡಿಕೊಂಡು ತಮ್ಮ ಮಕ್ಕಳಿಗೆ ನೀಡಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾದ ಆಸ್ತಿಗಳನ್ನು ಬಸಪ್ಪ ಈತನ ಮಕ್ಕಳು ತಮಗೆ ಬಂದ ವಾಟ್ನಿ ಪ್ರಕಾರ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಬಸಪ್ಪನ ಮಕ್ಕಳಿಗೆ ಚಾಕರಿ ಜಮೀನು ಇತ್ತು ಎಂದು ನುಡಿಯುತ್ತಾರೆ. ರಾಮಣ್ಣ ಇವರು ಖರೀದಿ ಹಿಡಿದ ಆಸ್ತಿಗಳನ್ನು ಎಷ್ಟು ವರ್ಷಗಳವರೆಗೆ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಗಾಳೆಪ್ಪ ಈತ ತಾನು ರಾಮಪ್ಪ ಇವರಿಗೆ ಖರೀದಿ ನೀಡಿದ ಆಸ್ತಿಗಳ ಖರೀದಿ ಪತ್ರಗಳನ್ನು ಎಲ್ಲಿಯೂ ಪ್ರಶ್ನಿಸದೇ ತೀರಿಕೊಂಡಿರುತ್ತಾನೆ ಎಂದರೆ ಸರಿ.

2. ಖರೀದಿ ಪತ್ರಗಳು ಯಾವ ಇಸವಿಯಲ್ಲಿ ಆಗಿರುತ್ತವೆ ಎಂದು ಗೊತ್ತಿಲ್ಲ. ದಿನಾಂಕ 23-05-1967 ರಲ್ಲಿ ಒಂದು ಖರೀದಿ ಪತ್ರ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ದಿನಾಂಕ 06-05-1968 ರಂದು ಸರ್ವೇ ನಂ.17/2 ರ 13 ಎಕರೆ ಪೈಕಿ ಉತ್ತರ ಬಾಜುದ 01 ಎಕರೆ 20 ಗುಂಟೆ ಜಮೀನಿನ ಖರೀದಿ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ದಿನಾಂಕ 19-12-1970 ರಂದು ಸರ್ವೇ ನಂ.17/2 ಬ ಪೈಕಿ 07 ಎಕರೆ 16 ಗುಂಟೆ ಜಮೀನಿನ ಪೈಕಿ ಉತ್ತರ ಬಾಜುದ 03 ಎಕರೆ 10 ಗುಂಟೆ ಜಮೀನಿನ ಖರೀದಿ ಆಗಿರುತ್ತದೆ ಎಂದರೆ ಸರಿ. ದಿನಾಂಕ 01-07-1971 ರಂದು ಸರ್ವೇ ನಂ.17/2 ಬ/2 ರ 04 ಎಕರೆ 03 ಗುಂಟೆ ಪೈಕಿ ಉತ್ತರ ಬಾಜುದ 00 ಎಕರೆ 25 ಗುಂಟೆ ಜಮೀನಿನ ಖರೀದಿ ಆಗಿರುತ್ತದೆ ಎಂದರೆ ಸರಿ ದಿನಾಂಕ 14-12-1972 ರಂದು ಸರ್ವೇ ನಂ.17/2 ಬ/2 ರ 03 ಎಕರೆ 18 ಗುಂಟೆ ಜಮೀನಿನ ಪೈಕಿ ಉತ್ತರ ಬಾಜುದ ಜಮೀನಿನ ಖರೀದಿ ಆಗಿರುತ್ತದೆ ಎಂದರೆ ಸರಿ. ಈ ಎಲ್ಲಾ ಖರೀದಿ ಪತ್ರಗಳನ್ನು ರದ್ದುಪಡಿಸುವಂತೆ ಈ ಹಿಂದೆ ನಾನಾಗಲೀ, ನನ್ನ ತಂದೆ ಗಾಳೆಪ್ಪ ಇವರಾಗಲೀ ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ರಾಮಣ್ಣನ ಹೆಸರು 1968 ರಿಂದ

1972 ರವರೆಗೆ ಆದ ಖರೀದಿ ಪತ್ರಗಳ ಪ್ರಕಾರ ಕಂದಾಯ ದಾಖಲೆಗಳಲ್ಲಿ ನಮೂದು ಆಗಿದ್ದು ಅವುಗಳನ್ನು ನಾವು ಪ್ರಶ್ನಿಸಿಲ್ಲ. ಸಾಕ್ಷಿ ಅವು ಮೋಸದ ಖರೀದಿ ಪತ್ರಗಳು ಎಂದು ಮುಂದುವರೆದು ನುಡಿಯುತ್ತಾರೆ. ಖರೀದಿ ನೀಡಿದ ಆಸ್ತಿಗಳು ಚಾಕರಿ ಜಮೀನುಗಳು ಎಂದು ಸಾಧಿಸಿ ಅವುಗಳನ್ನು ನಮಗೆ ನೀಡಲು ಯಾವುದೇ ಕಂದಾಯ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಹಾಗೇ ರಾಮಣ್ಣ ಇವರ ಖರೀದಿ ಪತ್ರಗಳ ವಿಷಯ ನನಗೆ 1988 ರಲ್ಲಿ ಮೊದಲಿಗೆ ಗೊತ್ತಾಗಿರುತ್ತದೆ. ಆಗ ನನಗೆ 24 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಹಾಗೇ 1988 ರಲ್ಲಿ ಖರೀದಿ ಪತ್ರಗಳನ್ನು ರದ್ದುಪಡಿಸಬೇಕು ಎಂದು ದಾವೆ ಸಲ್ಲಿಸಿಲ್ಲ. ಗಾಳೆಪ್ಪ ಇವರು ದಾವಾದ ಆಸ್ತಿಗಳನ್ನು ರಾಮಣ್ಣ ಕೆಂಚಣ್ಣನವರ ಇವರಿಗೆ 1968 ರಿಂದ 1972 ರವರೆಗಿನ ಖರೀದಿ ಪತ್ರಗಳ ಪ್ರಕಾರ ಮಾರಾಟ ಮಾಡಿದ್ದು, ಆದ್ದರಿಂದ ಸದರಿ ಆಸ್ತಿಗಳಲ್ಲಿ ನಮಗೆ ಏನು ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಚಾಕರಿ ಜಮೀನು ನಮಗೆ ಕೊಡಿಸಬೇಕು ಎಂದು ಪರಿಹಾರ ಬೇಡಿ ಸಲ್ಲಿಸಿರುತ್ತೇನೆ. ಇದನ್ನು ಹೊರತುಪಡಿಸಿ ನಾನು ಬೇರೆ ಪರಿಹಾರ ಕೋರಿಲ್ಲ ಎಂದರೆ ಸರಿ. ರಾಮಣ್ಣ ಮತ್ತು ಬಸಪ್ಪ ಇವರು ತಾವು ಖರೀದಿ ಹಿಡಿದ ಜಮೀನುಗಳ ಮೇಲೆ ತಮ್ಮ ಜೀವಿತ ಅವಧಿಯಲ್ಲಿ ಕಾಲ ಕ್ರಮೇಣ ಬ್ಯಾಂಕುಗಳಿಂದ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಾವೆಗೆ ಮತ್ತು ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದನ್ನು ಹೊರತುಪಡಿಸಿ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಉತ್ತರ ನೀಡುತ್ತಿಲ್ಲ. ದಾವಾದ ಆಸ್ತಿಗಳು ಚಾಕರಿ ಜಮೀನು ಅಲ್ಲ , ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಗಾಳೆಪ್ಪ ಇವರು ತಮ್ಮ ಜೀವಿತ ಅವಧಿಯಲ್ಲಿಯೇ ದಾವಾದ ಆಸ್ತಿಗಳನ್ನು ರಾಮಣ್ಣ ಇವರಿಗೆ ಖರೀದಿ ನೀಡಿದ್ದು, ಅಲ್ಲಿಂದ ಅವರ ಕುಟುಂಬದವರೇ ಆಸ್ತಿಗಳನ್ನು ಸ್ವಾಧೀನ ಹೊಂದಿರುವುದರಿಂದ ಈಗ ಗಾಳೆಪ್ಪ ತೀರಿಕೊಂಡ ನಂತರ ನಾನು ಮುದ್ದಾಮ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನನಗಾಲೀ, ನನ್ನ ಸಹೋದರರಿಗಾಗಲೀ ದಾವಾ ಆಸ್ತಿಗಳಲ್ಲಿ ಏನು ಹಕ್ಕು ಇಲ್ಲ

ಎಂದರೆ ಸರಿಯಲ್ಲ. ದಾವಾದ ಆಸ್ತಿಗಳ ಮಾಲೀಕರು ನಾವು ಅಲ್ಲ , ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ.

<u>ಪಾಟೀಸವಾಲು: </u>ಪ್ರತಿವಾದಿ ನಂ.1 ಮತ್ತು 3 ರವರ ಪರ ಶ್ರೀ. ಎನ್ ಎಮ್ ಪಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳ: ಸವಣೂರ).